ಕೆಲಸವೂ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡ ಲೆಕ್ಕವೇ ಆಯಿತಂತೆ. ಎರಡೇ ವರ್ಷಗಳಲ್ಲಿ ಪ್ರೊಫೆಸರ್ ಹುದ್ದೆಯಿಂದ ಬಿಡುಗಡೆ ಪಡೆದು ಹೊರದೇಶಗಳಿಂದ ಬರುವ ಪ್ರವಾಸಿಗಳಿಗೆ ಗೈಡ್ ಆಗಿ ಕೆಲಸ ಮಾಡಲು ಕಂಪನಿಯೊಂದರಿಂದ ನಿಯುಕ್ತನಾದ. ಇದೀಗ ಇಡೀ ಯುರೋಪಿನ ಹತ್ತಾರು ಪುಟ್ಟ ಪುಟ್ಟ ದೇಶಗಳನ್ನು ತಿರುಗುವುದೇ ಅವನ ಕೆಲಸ. ಪ್ರವೃತ್ತಿಯೇ ವೃತ್ತಿಯಾಗಿ ಸದ್ಯಕ್ಕಂತೂ ಈ ಕೆಲಸ ತೃಪ್ತಿ ನೀಡಿದೆ ಎಂದು ಹೇಳಿದ. ''ಮೇಲಾಗಿ ನಿನ್ನಂಥ ಪ್ರವಾಸಿಗಳ ಪರಿಚಯದಿಂದ ಜೀವನಕ್ಕೆ ಹೊಸ ಹುರುಪು ಕೂಡ ಸಿಗುತ್ತದಲ್ಲ!'' ಎಂದು ನಕ್ಕ.

ಹುಟ್ಟುವಾಗಲೇ ಮುಖಕ್ಕೆ ನಗೆಯನ್ನು ಅಂಟಿಸಿಕೊಂಡೇ ಹುಟ್ಟಿದ್ದಾನೆ ಎನಿಸುವಷ್ಟು ನಗುತ್ತಲೇ ಇರುತ್ತಾನೆ. ಫೋಟೊ ತೆಗೆಸಿಕೊಳ್ಳುವಾಗ ಉಳಿದವರಿಗೆ ಹೇಳುವಂತೆ, ''ಸ್ಮೈಲ್ ಪ್ಲೀಸ್'' ಎಂದು ಹೇಳುವ ಪ್ರಶ್ನೆಯೇ ಇಲ್ಲ ಇವನಿಗೆ ಎನಿಸಿ ಮತ್ತೆ ನಗು ಬಂತು. ''ನಿನ್ನ ಈ ಸುಂದರ ನಗುವಿನ ಕಾರಣವನ್ನು ನನಗೂ ಹೇಳುವ ಕೃಪೆ ಮಾಡಿದರೆ ನಾನೂ ನಗಬಹುದು'' ಎಂದು ಮತ್ತೊಮ್ಮೆ ಬಿನ್ನವಿಸಿದ ಫೆಲಿಕ್ಸ್. ಇವಳು ಹೇಳಿದ ಮಾತು ಕೇಳಿ ಮತ್ತೂ ನಕ್ಕ. ಇಡೀ ಭೂಮಿಯ ಸಕಲ ಚರಾಚರಗಳು ನಗುನಗುತ್ತ ಹೀಗೆಯೇ ಸುಖವಾಗಿರಬಾರದೇ?

ಸುಖಾಸುಮ್ಮನೇ ಮುಖ ಉಬ್ಬಿಸಿಕೊಂಡು, ಇಡೀ ಸಂಸಾರದ ಭಾರ ಮೈ ಮೇಲೆ ಬಿದ್ದವರಂತೆ ಮೊಗಂ ಆಗಿರುವ ಸಂದೇಶನ ನೆನಪು ಬಂತು. ಸಂದೇಶ, ಅವಳ ಟಿಪಿಕಲ್ ಇಂಡಿಯನ್ ಗಂಡ, ಸದಾ ಸದಾ ತನ್ನ ಕೆಲಸಗಳಲ್ಲೇ ಮುಳುಗೇಳುವವನು, ತಾನು ಹುಟ್ಟಿರುವುದೇ ಕೆಲಸ ಮಾಡುವುದಕ್ಕಾಗಿ ಎಂಬಂತೆ. ಬಾರಯ್ಯಾ, ಒಂದಿಷ್ಟು ದಿನ ಟೂರ್ ಮಾಡಿಕೊಂಡು ಕಳೆದುಹೋದ ಯೌವನವನ್ನು ಮರಳಿ ಗಳಿಸೋಣ, ಮದುವೆಯಾದ ಹೊಸತರಲ್ಲಿ ಕೈಕೈ ಹಿಡಿದು ನಡೆದಂತೆ ಮತ್ತೊಮ್ಮೆ ನಡೆಯೋಣ ಎಂದು ಹೇಳಿದ್ದೆ. ಅಂಥ ಯಾವ ರಸಿಕತೆಯೂ ಇಲ್ಲದ ರಸಹೀನನ ದೌರ್ಭಾಗ್ಯಕ್ಕೆ ನಾನು ಮರುಕ ತೋರಬಹುದಷ್ಟೇ. ನನ್ನ ಪಾಲಿನ ಸುಖವನ್ನೇಕೆ ಕಳೆದುಕೊಳ್ಳಬೇಕು ಎಂದು ಯೋಚಿಸಿದ್ದಳು ಶಾಲೂ. ಬೆಳೆದ ಮಗಳು ಮತ್ತು ಮಗ ಹೆಚ್ಚಿನ ಕಿರಿಕಿರಿಯಿಲ್ಲದೇ ಅಮ್ಮನಿಗೆ ಪರ್ಮಿಶನ್ ಕೊಟ್ಟಿದ್ದರು. ಮದುವೆಯೇ ಆಗದ, ಒಳ್ಳೆಯ ಸಂಬಳವಿರುವ ನೌಕರಿಯಲ್ಲಿರುವ ಇಂದೂ ಇವಳ ಕೋರಿಕೆಗೆ ತಕ್ಷಣ ಸ್ಪಂದಿಸಿದ್ದಳು. ಇಬ್ಬರೂ ಸೇರಿ ಸಾಕಷ್ಟು ಪಂಪ್ ಹೊಡೆದ ಮೇಲೆ ಜಾನಕಿ ತಯಾರಾಗಿದ್ದಳು. ಅವಳ ಸಾಫ್ಟ್‌ವೇರ್ ಮಗ ಟಿಕೇಟು ತೆಗಿಸಿಕೊಟ್ಟರೂ ವಟವಟಗುಟ್ಟುತ್ತಲೇ ಕಳಿಸಿಕೊಟ್ಟಿದ್ದ ಪತಿ. ಅಂತೂ ಹೀಗೊಂದು ಸೀಮೋಲ್ಲಂಘನದ ನಂತರ ಅವರ ಕ್ಷಿತಿಜವು ಬಗೆಬಗೆಯಾಗಿ ತೆರೆದುಕೊಳ್ಳುತ್ತಲಿತ್ತು.

ಡೈನಿಂಗ್ ಹಾಲ್‌ನ ಒಂದು ಮೂಲೆಯಲ್ಲಿ ದೊಡ್ಡದಾದ ಮಿರಿಮಿರಿ ಮಿಂಚುವ ಕಪ್ಪು ಮರದ ಪಿಯಾನೋದ ಎದುರು ಕುಳಿತ ಯುರೋಪಿಯನ್ ಯುವಕ ಅದನ್ನು ನುಡಿಸುತ್ತ ಹಾಡು ಹೇಳಲು ಶುರು ಮಾಡಿದ ತಕ್ಷಣ ಎಲ್ಲ ಸದ್ದು ಗದ್ದಲ ಕಡಿಮೆಯಾಯ್ತು. ಶಾಲೂ, ಇಂದೂ, ಜಾನು ತನ್ಮಯತೆಯಿಂದ ಪಿಯಾನೋ ನುಡಿಸುತ್ತಿದ್ದ ಯುವಕನನ್ನೇ ಮೆಚ್ಚುಗೆಯಿಂದ ನೋಡುತ್ತ ತಾವೂ ಮೂಲೆಯ ಟೇಬಲ್ಲೊಂದನ್ನು ಹಿಡಿದರು. ಮಂದ್ರದಲ್ಲಿ ನಿಧಾನವಾಗಿ ಶುರುವಾದ ಸಂಗೀತ ಬರುಬರುತ್ತ ವೇಗವನ್ನು ಪಡೆದುಕೊಂಡಿತು. ಮೃದುವಾಗಿ ನುಡಿಸುತ್ತಿದ್ದ ಬೆರಳುಗಳು ಯಾವುದೋ ಒತ್ತಡಕ್ಕೆ ಸಿಲುಕಿದಂತೆ ಸರಸರ ಓಡಲಾರಂಭಿಸಿದವು. ಅಲೆಗಳು ಓಡೋಡಿ ಬಂದು ದಡಕ್ಕೆ ಅಪ್ಪಳಿಸುವ ರೀತಿಯಲ್ಲಿ ಪಿಯಾನೋ ಸ್ವರಗಳು ನೆಮ್ಮದಿಯಿಲ್ಲದಂತೆ ತರಂಗಗಳನ್ನು ಎಬ್ಬಿಸತೊಡಗಿದವು. ಒಮ್ಮೆಲೇ ಹಲವಾರು ನಾದಗಳು ಹೊರಡುತ್ತಿದ್ದಂತೆ ಉನ್ಮತ್ತರಾದ ಜನ ಒಬ್ಬೊಬ್ಬರಾಗಿ ಮನಸ್ಸು ಬಂದಂತೆ ನೃತ್ಯ ಮಾಡಲು ತೊಡಗಿದರು. ಒಂದಿಬ್ಬರು ಗಂಡಸರು ಕುಡಿಯುತ್ತಿದ್ದ ಗ್ಲಾಸನ್ನು ಹಿಡಿದುಕೊಂಡೇ ಕುಣಿಯಲು ಮೊದಲು ಮಾಡಿದರು. ಒಲ್ಲೆ ಎನ್ನುವ ಹೆಂಡತಿಯನ್ನು ಬಿಡದೇ ಎಬ್ಬಿಸಿಕೊಂಡು ಡಾನ್ಸ್ ಮಾಡಲಾರಂಭಿಸಿದ ಜಗತಾಪ್‌ನನ್ನು ನೋಡಿ ಉಳಿದವರೂ